ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):- ಮಾನ್ಯ ಮುಖ್ಯಮಂತ್ರಿಗಳು ಮದ್ರಾಸ್‌ಗೆ ಹೋಗಿ ಕಾವೇರಿ ನೀರಿನ ಬಗ್ಗೆ ಮಾತನಾಡಿ, ನಂತರ ಆಲಮಟ್ಟಿ ವಿಷಯದ ಬಗ್ಗೆ ಮಾತನಾಡಲು ದೆಹಲಿಗೆ ಬೇರೆ ಹೋಗಬೇಕು. ಸೋಮವಾರ, ಮಂಗಳವಾರ ಆಗುವುದಿಲ್ಲ.

ಅಧ್ಯಕ್ಷರು:- ನಾಳೆ ದಿವಸ ಒಂದು ಗಂಟೆಗಳ ಕಾಲ ಹೆಚ್ಚು ಸದನವನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದು ಬೆಳಿಗ್ಗೆ 9.30ಕ್ಕೆ ಸೇರೋಣ. ಮೊದಲ ಒಂದು ಗಂಟೆಗಳ ಕಾಲ ಬೇಡಿಕೆ ಮೇಲೆ ಚರ್ಚೆಯನ್ನು ಮಾಡೋಣ. ಇಬ್ಬರೇ ಮಾತನಾಡಬೇಕಾಗಿದೆ. 10 ನಿಮಿಷ ಅವಕಾಶವನ್ನು ಕೊಡುತ್ತೇನೆ. ಇದಕ್ಕೆ ಸಹಕರಿಸಬೇಕು. ವಿದ್ಯುಚ್ಛಕ್ತಿ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ ಅಮೇಲೆ ಸಂಸದೀಯ ವ್ಯವಹಾರ ಸಚಿವರು ನಾವು ವಿಚಾರದಲ್ಲಿ ಸದನದ ಸಮಿತಿಯನ್ನು ರಚಿಸಬೇಕಾಗಿದೆ, ತಾವು ಮತ್ತು ವಿರೋಧ ಪಕ್ಷದ ನಾಯಕರು ಮತ್ತು ಸಹ ಸದಸ್ಯರು ಸಹಕರಿಸಬೇಕು.

(8) ಮಂತ್ರಿಗಳ ಹೇಳಿಕೆ

ವಿಷಯ:- ವಿದ್ಯುತ್‌ನರ ಪರಿಷ್ಕರಣೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಈ ವಿದ್ಯುತ್ ದರವನ್ನು ಸರ್ಕಾರ 1.7.1996ರಿಂದ ಅದನ್ನು ಪರಿಷ್ಕರಣೆಯನ್ನು ಮಾಡಿ ಸುಮಾರು 25 ಪರ್ಸೆಂಟ್‌ನಿಂದ 43 ಪರ್ಸೆಂಟ್‌ವರೆಗೆ ಹೆಚ್ಚಿಸಿ ಆದೇಶವನ್ನು ಹೊರಡಿಸಿತ್ತು. ಇದರ ಬಗ್ಗೆ ಮಾನ್ಯ ಸದಸ್ಯರುಗಳು, ವಿರೋಧ ಪಕ್ಷದ ನಾಯಕರುಗಳು, ನಮ್ಮ ಪಕ್ಷದ ಸದಸ್ಯರುಗಳೂ ಕೂಡ ಇದು ಹೆಚ್ಚಾಯಿತು ಇದನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಒತ್ತಾಯ ಬಂದಿದ್ದರ ಹಿನ್ನೆಲೆಯಲ್ಲಿ ಸದನ ಸಮಿತಿಯನ್ನು ಮಾಡಬೇಕೆಂದು ತೀರ್ಮಾನವಾಗಿ ತಾವು ಮತ್ತು ವಿಧಾನ ಪರಿಷತ್ತಿನ ಸಭಾಪತಿಗಳು ಜಂಟಿ ಸದನ ಸಮಿತಿಯನ್ನು ರಚನೆಯನ್ನು ಮಾಡಿ, ದರ ಮೇರೆಗೆ ಅವರು ಒಂದು ವರದಿಯನ್ನು ಸದನ ಮುಂದೆ ಇಟ್ಟಿದ್ದಾರೆ. ನಾವು ಹೆಚ್ಚು ಮಾಡಿದಂತಹ ದರಗಳ ಬಗ್ಗೆ ಪೂರ್ಣವಾಗಿ ಪರಿಶೀಲನೆಯನ್ನು ಮಾಡಿ ಪರಿಷ್ಕರಣ ದರವನ್ನು ಕೊಟ್ಟಿದ್ದಾರೆ. ಸುಮಾರು 13 ಪರ್ಸೆಂಟ್‌ನಿಂದ 40 ಪರ್ಸೆಂಟ್‌ವರೆಗೆ ಬೇರೆ ರೀತಿಯಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದಾರೆ. ನಾವು ಸರ್ಕಾರದ ನಿರ್ಣಯದ ಪ್ರಕಾರ 873 ಕೋಟಿ ಒಂದು ವರ್ಷಕ್ಕೆ ಹೆಚ್ಚು ತರುವಂತಹ ರೀತಿಯಲ್ಲಿ ನಿರ್ಣಯವನ್ನು ಮಾಡಿದ್ದೆವು. ಈಗ ಸದನ ಸಮಿತಿಯವರು 243 ಕೋಟಿ ರೂಪಾಯಿಗಳನ್ನು ರಿಯಾಯಿತಿ ಕೊಟ್ಟಿದ್ದಾರೆ. ರೈತರಿಗೆ, ಗೃಹ ಬಳಕೆಯವರಿಗೆ, ಎ.ಇ.ಹೆಚ್. ಬಳಕೆದಾರರಿಗೆ, ಎಲ್.ಟಿ. ಉಪಯೋಗಿಸುವಂಥವರಿಗೆ, ಸಣ್ಣ ಕೈಗಾರಿಕೆಯವರಿಗೆ, ಮತ್ತು ಪಂಪ್ ಸೆಟ್‌ಗಳವರಿಗೆ ಎಲ್ಲರಿಗೂ ರೈತರು ಉಪಯೋಗಿಸುವಂತಹ ಪಂಪ್‌ಸೆಟ್‌ಗಳಿಗೆ ಒಂದು ಹೆಚ್.ಪಿ.ಗೆ ಸರ್ಕಾರದವರು ತೆಗೆದುಕೊಂಡಂತಹ ನಿರ್ಣಯ 300 ರೂಪಾಯಿಗಳು. ಆದರೆ ಸದನದ ಸಮಿತಿಯವರು ಅದನ್ನು 300 ರೂಪಾಯಿಗಳಿಂದ 100

ರೂಪಾಯಿಗಳಿಗೆ ಇಳಿಸಿದ್ದಾರೆ. ಅವರು ಏನು ಈಗ ದರಗಳನ್ನು ಶಿಫಾರಸ್ಸು ಮಾಡಿದ್ದಾರೆ ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಅದನ್ನು 1-7-1996 ರಿಂದ ಜಾರಿಗೆ ತರತಕ್ಕಂತಹ ತೀರ್ಮಾನವನ್ನು ಕೂಡ ಮಾಡಿದ್ದೇವೆ. ಸದನ ಸಮಿತಿಯವರು ಕೂಡ ಅದೇ ರೀತಿಯಲ್ಲಿ ಶಿಫಾರಸ್ಸನ್ನು ಮಾಡಿದ್ದಾರೆ. ಇದನ್ನು ಸರ್ಕಾರ ಒಪ್ಪಿಕೊಂಡಿದೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು:- ಈ ವಿಚಾರದಲ್ಲಿ ಅತ್ಯಂತ ಶ್ರದ್ಧೆಯಿಂದ ಕೆಲಸವನ್ನು ಮಾಡಿದಂತಹ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ.ಜಿ. ಶಿವಕುಮಾರ್‌ರವರನ್ನು ಮತ್ತು ಅವರ ಜೊತೆಯಲ್ಲಿ ಸಹಕರಿಸಿದಂತಹ ಸಮಿತಿಯ ಸದಸ್ಯರುಗಳನ್ನು ನಾನು ಮನಪೂರ್ವಕವಾಗಿ ಅಭಿನಂದಿಸುತ್ತಿದ್ದೇನೆ.

ಈಗ ಸದನವು ಮುಂದುಡಲ್ಪಟ್ಟು ಮತ್ತು ಬೆಳಿಗ್ಗೆ 9.30ಕ್ಕೆ ಸಮಾವೇಶಗೊಳ್ಳುವುದು.

(ಸದನವು ರಾತ್ರಿ 8.08 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ನಾಳೆ 2.8.96 ಶುಕ್ರವಾರ ಬೆಳಿಗ್ಗೆ 9.30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)